ಗಮನ ಸೆಳೆಯುವ ಸೂಚನೆಗಳು

ವಿಷಯ : (ಅ) "ಕೂಲಿಗಾಗಿ ಕಾಳು" ಯೋಜನೆಗೆ ಮೀಸಲಿಟ್ಟ ಅಕ್ಕಿ ಹಾಳಾಗಿರುವುದು ಹಾಗೂ ಯೋಜನೆ ಸ್ಥಗಿತವಾಗಿರುವ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಸರ್ಕಾರದ ವಿವಿಧ ಇಲಾಖೆಗಳಲ್ಲ ದಾಸ್ತಾನು ಇರುವ ಕೋಟ್ಯಾಂತರ ರೂಪಾಯಿ ಕೂಲಿಗಾಗಿ ಕಾಳು ಯೋಜನೆಗಾಗಿ ಹಾಳಾಗುವ ಬಗ್ಗೆ ಮತ್ತು ಆ ಯೋಜನೆ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವ ಬಗ್ಗೆ ಸನ್ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರ ಸಚಿವರು ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಉದ್ಯೋಗ ಸೃಜನೆ ರಾಜ್ಯದಲ್ಲಿ ಸತತ ಮೂರು ವರ್ಷಗಳಿಂದ ಬರ ಪರಿಸ್ಥಿತಿ ಇದ್ದ ಪ್ರಯುಕ್ತ ಬರಪೀಡಿತ ಪ್ರದೇಶಗಳಲ್ಲಿ ಸೃಜನೆ ಕಾಮಗಾರಿಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಆಹಾರಧಾನ್ಯಗಳನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮೆಮರಾಂಡಂ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು 2002ನೇ ಸೆಪ್ಟಂಬರ್‌ನಿಂದ ಮೇ 2004ರ ವರೆಗೆ ರಾಜ್ಯಕ್ಕೆ 14.49 ಲಕ್ಷ ಮೆ.ಟನ್ ಆಹಾರಧಾನ್ಯಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಿರುತ್ತದೆ. ಈ ರೀತಿ ಬಿಡುಗಡೆ ಮಾಡಿರುವ ಆಹಾರಧಾನ್ಯಗಳಲ್ಲಿ 12.78 ಲಕ್ಷ ಮೆ.ಟನ್ ಆಹಾರಧಾನ್ಯಗಳನ್ನು ಗೋಡೌನ್ ಗಳಿಂದ ಅನುಷ್ಟಾನಾಧಿಕಾರಿಗಳು ಎತ್ತುವಳಿ ಮಾಡಿರುತ್ತಾರೆ. ಅದರಲ್ಲಿ 11.82 ಲಕ್ಷ ಮೆ.ಟನ್ ಆಹಾರಧಾನ್ಯಗಳನ್ನು ಬರ ಪರಿಹಾರ ಕಾಮಗಾರಿಗಾಗಿ ದಿನಾಂಕ : 12.7.2004ರ ವರೆಗೆ ಬಳಸಲಾಗಿದೆ. ಹಂಚಿಕೆ ಮಾಡಿರುವ ಆಹಾರಧಾನ್ಯಗಳಲ್ಲಿ ಸುಮಾರು 1.71 ಲಕ್ಷ ಮೆ.ಟನ್ ಆಹಾರಧಾನ್ಯಗಳನ್ನು ಇನ್ನು ಎತ್ತುವಳಿ ಮಾಡಬೇಕಾಗಿದೆ. ಈಗಾಗಲೇ ಎತ್ತುವಳಿ ಮಾಡಿ ಬಳಕೆಯಾಗದೆ ಇರುವ ಆಹಾರಧಾನ್ಯಗಳು ಹಾಳಾಗುತ್ತಿರುವ ಬಗ್ಗೆ ಯಾವುದೇ ಜಿಲ್ಲೆಗಳಿಂದ ಸರ್ಕಾರಕ್ಕೆ ದೂರು/ವರದಿ ಬಂದಿರುವುದಿಲ್ಲ.

ಆಹಾರಧಾನ್ಯಗಳ ಅಕ್ರಮ ದಾಸ್ತಾನುಗಳ ಹಿನ್ನೆಲೆಯಲ್ಲಿ ಬರ ಪರಿಹಾರ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

† **ಶ್ರೀ ಎ.ಟಿ. ರಾಮಸ್ವಾಮಿ** : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸಚಿವರು ಯಾವುದೇ ಅಕ್ಕಿ ಹಾಳಾಗಿಲ್ಲ ಎನ್ನುವಂತಹ ವರದಿಯನ್ನು ಕೊಟ್ಟಿದ್ದಾರೆ. ಮತ್ತೆ ಕೂಲಿಗಾಗಿ ಕಾಳು ಯೋಜನೆ ಕಾಮಗಾರಿಗಳು ಕೂಡ ಸ್ಥಗಿತಗೊಂಡಿಲ್ಲ ಎನ್ನುವ ಮಾತನ್ನು ವರದಿಯನ್ನೇ ಹೇಳಿದ್ದಾರೆ. ಆದರೆ ನಾನೇನು ಹೇಳುವುದಕ್ಕೆ ಬಯಸುತ್ತೇನೆ. ಎಂದರೆ ಇದು ಸತ್ಯಕ್ಕೆ ದೂರವಾದ ವಿಷಯ. ನಮಗೆಲ್ಲಾ ಗೊತ್ತಿದೆ, ಈಗ 1,71,000 ಮೆಟ್ರಿಕ್ ಆಹಾರಧಾನ್ಯ ಎತ್ತುವಳಿ ಮಾಡಿಲ್ಲ. ಎತ್ತುವಳಿ ಮಾಡಿರುವ ಪೈಕಿ 96,000 ಟನ್‌ಗಳನ್ನು ಉಪಯೋಗಿಸಿಕೊಂಡಿಲ್ಲ. ಒಟ್ಟು 2,67,000 ಮೆಟ್ರಿಕ್ ಟನ್ ಅಕ್ಕಿ ನಮ್ಮ ರಾಜ್ಯದಲ್ಲಿ ದಾಸ್ತಾನು ಇದೆ. ಅದರ ಮೊತ್ತ 166 ಕೋಟಿ 87 ಲಕ್ಷ 50 ಸಾವಿರ ರೂಪಾಯಿಗಳಾಗುತ್ತದೆ. ನಮಗೆ ಎಲ್ಲಾ ಗೊತ್ತಿದೆ. ಎತ್ತುವಳಿ ಏನು ಮಾಡಿಕೊಂಡಿದ್ದಾರೆ. ಆ ಎತ್ತುವಳಿಯಲ್ಲಿ ಮಾಡಿಕೊಂಡಿರುವ ತಾಲ್ಲೂಕು ಪಂಚಾಯಿತಿ ಇರಬಹುದು, ಜಿಲ್ಲಾಪಂಚಾಯತ್ ಇರಬಹುದು, ಪಿಡಬ್ಲ್ಯೂಡಿ ಇರಬಹುದು. ಸಾಮಾಜಿಕ ಅರಣ್ಯೀಕರಣ ಯೋಜನೆಯಲ್ಲಿ ಇರಬಹುದು ಅಥವಾ ಜಲಾನಯನ

ಅಭಿವೃದ್ಧಿ ಇಲಾಖೆಯಲ್ಲಿ ಇರಬಹುದು ದಾಸ್ತಾನು ಇಡುವುದಕ್ಕೆ ಅವರಿಗೆ ಸರಿಯಾದ ಗೋಡೌನ್ ಇಲ್ಲ. ಅದನ್ನು ಅವರು ಒಂದು ಹೆಂಚಿನ ಮನೆಯಲ್ಲಿ ಹಾಕಿದ್ದಾರೆ. ಅದೆಲ್ಲಾ ಸಂಪೂರ್ಣವಾಗಿ ಮುಗ್ಗಲು ಬಂದು ಮಣ್ಣಾಗತಕ್ಕಂಥ ಸಂದರ್ಭ ಇದೆ. ನಮ್ಮ ಮಂತ್ರಿಗಳು ಏಕೆ ಸತ್ಯವನ್ನು ಹೇಳುತ್ತಿಲ್ಲಂಬುದು ಗೊತ್ತಿಲ್ಲ. ಮತ್ತೆ ಕಾಮಗಾರಿಗಳು ಯಾವುದೂ ಸ್ಥಗಿತಗೊಂಡಿಲ್ಲವೆಂದು ಹೇಳಿದ್ದಾರೆ. ಆದರೆ ನಿನ್ನೆ ನಮ್ಮ ಜಲಸಂಪನ್ಮೂಲ ಇಲಾಖೆ ಸಚಿವರು ಉತ್ತರ ಕೊಡುತ್ತಾ ಚುಕ್ಕೆ ಗುರುತಿನ ಪ್ರಶ್ನೆಗೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಹೇಳಿದರು. ಆದರೆ ಇವರು ಹೇಳುತ್ತಿದ್ದಾರೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತು ನಾನು ವಿನಂತಿ ಮಾಡುತ್ತಿದ್ದೇನೆ, ಇವತ್ತು ಅಕ್ಕಿ ಏನಿದೆ ಅದು ಮುಗ್ಗಲು ಬಂದು ಮಣ್ಣು ಆಗುವುದಕ್ಕೆ ದಯವಿಟ್ಟು ಬಿಡುವುದು ಬೇಡ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿಲ್ಲವೆಂದು ಹೇಳುತ್ತಾರೆ. ಈ ಕಡೆ ಮತ್ತು ಆ ಕಡೆ ಕುಳಿತಿರುವಂತಹ ಎಲ್ಲರಿಗೂ ಗೊತ್ತಿದೆ. ಈ ಕೂಲಿಗಾಗಿ ಕಾಳು ಯೋಜನೆ ಸಂಪೂರ್ಣವಾಗಿ ನಿಂತು ಹೋಗಿದೆ. ಈ ಕೂಲಿಗಾಗಿ ಕಾಳು ಯೋಜನೆ ಕೆಲಸವನ್ನು ಪ್ರಾರಂಭ ಮಾಡಿಸಬೇಕು. ಅಕ್ಕಿ ಮುಗ್ಗಾಗಿ ಮಣ್ಣಾಗುವುದಕ್ಕೆ ಬಿಡಬಾರದೆಂಬುದು ನಮ್ಮೆಲ್ಲರ ಕಳಕಳಿಯಾಗಿದೆ. ಈಗ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ನೋಂದಾಯಿತ ಸ್ಥಳೀಯ ಕೂಲಿ ಕಾರ್ಮಿಕರನ್ನು ಬಳಸಿಕೊಂಡು, ಕೂಲಿ ಕಾರ್ಮಿಕ ಆಧಾರಿತ, ಕಾಮಗಾರಿಗಳನ್ನೇ ಮಾಡಬೇಕೆಂದು ಮಾರ್ಗದರ್ಶಿ ಸೂತ್ರ ಹೇಳುತ್ತಾರೆ. ಜಿಲ್ಲಾ ಮಟ್ಟದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಒಂದು ಸಮಿತಿ ಇದೆ, ತಾಲ್ಲೂಕು ಮಟ್ಟದಲ್ಲಿ, ತಾಲ್ಲೂಕಿನ ಶಾಸಕರ ನೇತೃತ್ವದ ಸಮಿತಿ ಇದೆ. ಈ ಸಮಿತಿಗಳು ಏನು ಮಂಜೂರಾತಿಯನ್ನು ಮಾಡಿ ಕಾಮಗಾರಿಗಳನ್ನು ಕೊಡುತ್ತದೆ, ಅದಕ್ಕೆ ಜಿಲ್ಲಾಧಿಕಾರಿಗಳು ಅನುಮೋದನೆಯನ್ನು ನೀಡಿ, ಕೆಲಸವನ್ನು ಪ್ರಾರಂಭ ಮಾಡುತ್ತಾರೆ, ಈ ಕೆಲಸಗಳನ್ನು ಏನು ಪ್ರಾರಂಭ ಮಾಡುತ್ತಾರೆ. ಕೆಲಸಗಳು ಸರಿಯಾಗಿ ನಡೆದಿದೆಯೋ, ಇಲ್ಲವೋ, ಎಂಬುದನ್ನು ನೋಡುವಂತಹ " The Committee should review and monitor the relief measures" ಅಂತ ಮಾರ್ಗಸೂಚಿಯಲ್ಲಿದೆ, ಈ ಕಾರ್ಯಾಚರಣೆಗಳು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ, ಎಂಬುದನ್ನು ಖುದ್ದಾಗಿ ಜಿಲ್ಲಾಧಿಕಾರಿಗಳು, ಅದಕ್ಕಿಂತ ಹೆಚ್ಚಾಗಿ ರಾಜ್ಯಮಟ್ಟದಿಂದ, ರಾಜ್ಯ ಮಟ್ಟದ ಒಬ್ಬರು ಕಾರ್ಯದರ್ಶಿಯವರು, ಎಲ್ಲಾ ಜಿಲ್ಲೆಗಳಿಗೂ ಒಬ್ಬರು ನೋಡಲ್ ಅಧಿಕಾರಿಗಳು, ಇವರು ಸ್ಥಳಕ್ಕೆ ಹೋಗಿ, ಅಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೋ, ಕಾಳು ವಿತರಣೆ ಆಗಿದೆಯಾ ಎಂಬುದನ್ನು ಪರಿಶೀಲನೆ ಮಾಡಿ, ಕಾಳು ಸರಿಯಾಗಿ ಬಳಕೆಯಾಗಿದೆ, ಎಂದು ಹೇಳಿ ಬಳಕೆ ಪ್ರಮಾಣ ಪತ್ರವನ್ನು ಯುಟಿಲೈಜೇಷನ್ ಸರ್ಟಿಫಿಕೇಟನ್ನು ಕೊಟ್ಟಮೇಲೆ, ಮುಂದಿನ ಕಂತಿನ ಅಕ್ಕಿಯ ಎತ್ತುವಳಿಯಾಗಿದೆ, ಇದು ಮೂರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಸುಮಾರು ಒಂಭತ್ತು ಕಂತಿನಲ್ಲಿ ಅಕ್ಕಿಯನ್ನು ವಿತರಣೆ ಮಾಡಿದ್ದಾರೆ. ಈ ನೋಡಲ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರರು, ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಈ "ಕೂಲಿಗಾಗಿ ಕಾಳು" ಯೋಜನೆ ಸಮರ್ಪಕವಾಗಿ ಅನುಷ್ಠಾನವಾಗಿದೆಯೆಂದು "ಬಳಕೆ ಪ್ರಮಾಣ ಪತ್ರ" ವನ್ನು ಕೊಟ್ಟಮೇಲೆ, ಮತ್ತೆ ಮುಂದಿನ ಕಂತಿನ ಅಕ್ಕಿ ಬಿಡುಗಡೆಯಾಗಿದೆ. ಇವತ್ತು ಈ ಅಕ್ಕಿ ಹಗರಣದಲ್ಲಿ ಯಾರನ್ನೋ ಸೇಫ್‌ಗಾರ್ಡ್ ಮಾಡುವುದು ಇಲ್ಲ, ನಾನು ಇಲ್ಲಿ ರಕ್ಷಣೆ ಮಾಡಬೇಕೆಂಬ ಮಾತನ್ನು ಹೇಳುತ್ತಾ ಇಲ್ಲ, ಅಥವಾ ಇನ್ನೋಬ್ಬರನ್ನು ಇಲ್ಲಿ ಬಲಿಪಶು ಮಾಡುವುದಕ್ಕೂ ಹೋಗಬಾರದು. ನಾನು ಹೇಳುವಂಥಾದ್ದು ಈ ಸರ್ಕಾರದ ಮಟ್ಟದಲ್ಲಿ ಕಾರ್ಯದರ್ಶಿಗಳು ಹೋಗಿ, ಉಸ್ತುವಾರಿ

ಮಾಡಿ ಕೆಲಸಗಳು ಸಮರ್ಪಕವಾಗಿ ಆಗಿದೆಯೆಂದು, ಕಳೆದ ಮೂರು ವರ್ಷಗಳಿಂದ ವರದಿಯನ್ನು ಕೊಟ್ಟು ಬಂದಿದ್ದಾರಲ್ಲಾ, ಅವರಿಗೆ ಇದರ ಜವಾಬ್ದಾರಿಕೆ ಇರಲಿಲ್ಲವಾ ? ಈ ಅಕ್ಕಿ ಕೊಟ್ಟು ಆಗಿದ್ದರೆ ಜಿಲ್ಲಾಧಿಕಾರಿಗಳು, ಅವರು ರಿಮ್ಯೂ ಮಾಡಬೇಕಾಗಿತ್ತು ಮಾನಿಟರ್ ಮಾಡಬೇಕಾಗಿತ್ತು. ಅವರು ಈ ಮೂರು ವರ್ಷಗಳ ಕಾಲ ಏನು ಮಾಡುತ್ತಿದ್ದರು ಅಕ್ಕಿ ದುರುಪಯೋಗವಾಗಿದೆಯೆಂದು ಹೇಳಿದ ಮೇಲೆ, ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತಿದ್ದೇನೆ. ಈ ಯೋಜನೆಯಲ್ಲಿ ಕಟ್ಟಡಗಳ ಕಾಮಗಾರಿಗಳನ್ನು ಕೈಗೊಳ್ಳಲೇ ಬಾರದೆಂದು ಮಾರ್ಗಸೂಚಿಯಲ್ಲಿದೆ. ಈಗ ಕಟ್ಟಡಗಳ ಕಾಮಗಾರಿಗಳನ್ನು ಮಾಡುವುದಕ್ಕೆ, ಡಾಂಬರ್ ರಸ್ತೆಗಳನ್ನು ಮಾಡುವುದಕ್ಕೆ, ಸೇತುವೆಗಳನ್ನು ಮಾಡುವುದಕ್ಕೆ ಮಂಜೂರಾತಿಯನ್ನು ಮಾಡಿಕೊಟ್ಟರು. very serious procedural lapses ಆಗಿದೆ. ಇಲ್ಲಿ ಕಟ್ಟಡಗಳನ್ನು, ಸೇತುವೆಗಳನ್ನು ಕಟ್ಟುವುದಕ್ಕೆ ಕೊಡಲೇಬೇಡಿ ಎಂದು ಇದ್ದರೆ, ಇವರು ಹೇಗೆ ಮಂಜೂರಾತಿಯನ್ನು ಕೊಟ್ಟರು ? ಮಂಜೂರಾತಿಯನ್ನು ಕೊಟ್ಟಮೇಲೆ, ಸಿಮೆಂಟ್ ಅನ್ನು ಹೇಗೆ ಪರ್ಚೆಸ್ ಮಾಡಿದರು, ಸ್ಟೀಲ್ ಅನ್ನು ಹೇಗೆ ಪರ್ಚೆಸ್ ಮಾಡಿದರು ? ಇದಕ್ಕೆ ಹಣ ಎಲ್ಲಿಂದ ಬಂತು ? ಅವರು ಒಂದು ಕಡೆ ಮಾರ್ಗಸೂಚಿ ವರದಿಯಲ್ಲಿ ಹೇಳುತ್ತಾರೆ. ಇದರಲ್ಲಿ ಕೂಲಿಗಾಗಿ ಶೇ. 33ರಷ್ಟು ಹಣ ಕೊಡಬೇಕೆಂದು ಇದೆ. ಶೇ. 67ರಷ್ಟು ಅಕ್ಕಿಯನ್ನು ಕೊಡಬೇಕೆಂದು ಇದೆ. ಅ ಶೇ. 33ರಷ್ಟು ಶೇ, 25ಕ್ಕೂ ಹೆಚ್ಚು ವಸ್ತುಗಳನ್ನು ಖರೀದಿ ಮಾಡಬೇಕೆಂದು ಇದೆ. ಇಲ್ಲಿ ಶೇಕಡಾ 33ರಷ್ಟು ನಗದು ಹಣವನ್ನು ಕೊಡುತ್ತಾರೆ, ಅದರಲ್ಲಿ ಶೇಕಡಾ 25ರಷ್ಟು ಮಾತ್ರ ಸಾಮಗ್ರಿಗಳನ್ನು ಕೊಂಡುಕೊಳ್ಳುವಂತಹ, ಕಾಮಗಾರಿಗಳನ್ನು ಮಂಜೂರಾತಿ ಮಾಡಬೇಕೆಂದು ಸರ್ಕಾರಿ ಆದೇಶದಲ್ಲಿ ಇದೆ. ಆದರೆ ಇಲ್ಲಿ ಆಡಳಿತಾತ್ಮಕವಾಗಿ ಮಂಜೂರಾತಿಯನ್ನು ಕೊಟ್ಟರು. ಇದನ್ನು ಗಮನಿಸಲಿಲ್ಲ. ಇದನ್ನು ಗಮನಿಸಿದರೂ ಮೌಖಿಕವಾಗಿ ಅವರಿಗೆ ಕೆಲಸವನ್ನು ಮಾಡಿ, go ahead ಎಂದು ಆದೇಶವನ್ನು ಕೊಟ್ಟರು. ಆ ಕೆಲಸಗಳು ಆದವು, ಇವತ್ತು ಇದರಲ್ಲಿ ಲೋಪವಾಗಿದೆಯೆಂದು ಕೆಲಸಗಳನ್ನು ನಿಲ್ಲಿಸಿದ್ದಾರೆ. ಅದಕ್ಕೆ ನಾನು ನಿಮ್ಮಲ್ಲಿ ಕೇಳಿಕೊಳ್ಳುವಂಥಾದ್ದು, ಈ ರೀತಿ ಮಂಜೂರಾತಿಯಾಗಿ ಪ್ರಾರಂಭಗೊಂಡ ಕೆಲಸಗಳು ಸಮರ್ಪಕವಾಗಿ ನಡೆದಿದೆಯಾ, ನಡೆದಿಲ್ಲವಾ? ಕೂಲಿಕಾರ್ಮಿಕರಿಗೆ ಅಕ್ಕಿ ತಲುಪಿದೆಯಾ, ಎಂಬುದನ್ನು ನೋಡತಕ್ಕಂಥಾದು ಜಿಲ್ಲಾಧಿಕಾರಿಗಳ ಹಾಗೂ ರಾಜ್ಯ ಮಟ್ಟದಿಂದ ಹೋಗಿದ್ದಂತಹ ನೋಡಲ್ ಅಧಿಕಾರಿಗಳ ಕರ್ತವ್ಯವಾಗಿತ್ತು. ಪ್ರತಿ ಹಂತದಲ್ಲೂ ನಾನು ಮೊದಲೇ ಹೇಳಿದ ಹಾಗೆ ಕೆಲಸ ಚೆನ್ನಾಗಿ ಆಗಿದೆ. ಅಕ್ಕಿ ಬಳಕೆಯಾಗಿದೆಯೆಂಬ ಬಳಕೆಯ ಪ್ರಮಾಣ ಪತ್ರವನ್ನು ಅವರು ಕೊಟ್ಟು, ಇವತ್ತು ಎಲ್ಲಾ ಸಮರ್ಪಕವಾಗಿದೆಯೆಂದು ಹೇಳಿದರು. ಈಗ ಒಂದೇ ಹಂತದಲ್ಲಿ ಕೂಡ ಅಕ್ಕಿಯನ್ನು ಬಿಡುಗಡೆ ಮಾಡಲಿಲ್ಲ. ಇದನ್ನು ಒಂಭತ್ತು ಹಂತದಲ್ಲಿ ಬಿಡುಗಡೆ ಮಾಡಿದ್ದಾರೆ. ಎಲ್ಲಾ ಹಂತದಲ್ಲೂ ಕೂಡ ಅಕ್ಕಿಯ ಬಳಕೆ ಸಮರ್ಪಕವಾಗಿದೆಯೆಂಬ ವರದಿಯನ್ನು ಕೊಟ್ಟಿದ್ದಾರೆ. ಆದಕಾರಣ ಇವತ್ತು ಇಲ್ಲಿ ಮಾನ್ಯ ಮಂತ್ರಿಯವರು ಏನು ವರದಿಯನ್ನು ಕೊಟ್ಟಿದ್ದಾರೆ. ಅಕ್ಕಿ ಹಾಳಾಗುತ್ತಿಲ್ಲವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದದ್ದು, ಮತ್ತೆ ಕೆಲಸವೂ ಕೂಡ ಸಮರ್ಪಕವಾಗಿ ಆಗಿಲ್ಲವೆಂಬ ಮಾತನ್ನು ಹೇಳುತ್ತೇನೆ. ನಾನು ಒಂದು ಮಾತನ್ನು ಹೇಳುವುದೇನೆಂದರೆ, ಕೆಲವರು ಲೋಪದೋಷಗಳನ್ನು ಮಾಡಿದ್ದಾರೆ. ಇಲ್ಲವೆಂದು ಹೇಳುವುದಿಲ್ಲ. There are white-collared criminals. ನಾನು ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅವರು ಯಾರ್ಯಾರೆಂದು ಗುರುತು ಮಾಡಿ ಅವರನ್ನು ಜೈಲಿಗೆ ಕಳುಹಿಸಿ. ಆದರೆ ನಾನು ಹೇಳಿದಂತೆ ಮೇಲ್ಪಟ್ಟದವರೂ ಜವಾಬ್ದಾರರು ಆಗಿದ್ದಾರೆ. ಇಲ್ಲಿ ರಾಜ್ಯ ಮಟ್ಟದ ಕಾರ್ಯದರ್ಶಿಗಳು, ಪ್ರತಿ ಜಿಲ್ಲೆಗಳಿಗೆ.

ನೋಡಲ್ ಅಧಿಕಾರಿಗಳಾಗಿದ್ದರು. ಇವರು ಸ್ಥಳಕ್ಕೆ ಹೋಗಿ ಅಲ್ಲಿ ಏನು ಆಗಿದೆಯೆಂಬುದನ್ನು ನೋಡಲಿಲ್ಲವೇ? ಮತ್ತೆ ಕಾಳು ಸಮರ್ಪಕವಾಗಿ ವಿತರಣೆ ಆಗಿದೆಯಾ, ಇಲ್ಲವಾ ಎಂಬುದನ್ನು ನೋಡಲಿಲ್ಲವೇ ? ಅವರು ಸಮರ್ಪಕವಾಗಿ ವರದಿ ಅನುಷ್ಟಾನವಾಗಿದೆಯೆಂದು ವರದಿಯನ್ನು ಕೊಡಲಿಲ್ಲವೇ ? ಆ ಕಾರಣದಿಂದ ಆ ದಿಕ್ಕಿನಲ್ಲಿ ನೀವು ಕ್ರಮವನ್ನು ಕೈಗೊಳ್ಳಬೇಕು, ಆ ರೀತಿ ಕ್ರಮ ಕೈಗೊಂಡರೆ ಮೊದಲು ಸೆಕ್ರೆಟರಿಗಳಿಂದ ಪ್ರಾರಂಭ ಮಾಡಿ. ಯಾವ ಕಟ್ಟಡಗಳಿಗೂ ಕಾಮಗಾರಿಗೆಂದು ಮಂಜುರಾತಿಯನ್ನು ಮಾಡಬಾರದೆಂದು ಮಾರ್ಗಸೂಚಿಯಲ್ಲಿತ್ತು, ಅದು ವೈಜ್ಞಾನಿಕವಾಗಿಲ್ಲ, ಆ ಮಾರ್ಗಸೂಚಿಯಂತೆ ಯಾರೂ ಅನುಷ್ಟಾನ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ವೈಜ್ಞಾನಿಕವಾಗಿಲ್ಲ, It is not practicable. ಅವೈಜ್ಞಾನಿಕವಾಗಿದೆ. ಮಾನ್ಯ ಸಚಿವರೇ, ನೀವು ಇದನ್ನು ಪರಿಷ್ಕರಣೆ ಮಾಡಲೇಬೇಕು. ಇವತ್ತು ಸುಮಾರು ಎರಡು ಲಕ್ಷದ ಅರವತ್ತೇಳು ಸಾವಿರ ಮೆಟ್ರಿಕ್ ಅಕ್ಕಿ ಇದೆ. ಇದು ಸುಮಾರು 166 ಕೋಟಿ, 167 ಕೋಟಿ ರೂಪಾಯಿಗಳ ಅಕ್ಕಿ ಇದೆ. ಇದು ಇವತ್ತು ಮುಗ್ಗಿ ಹೋಗಿ, ಮಣ್ಣಾಗುತ್ತದೆ, ಇದು ಅತ್ಯಂತ ಗಂಭೀರವಾದಂತಹ ಸಮಸ್ಯೆ. ಇದರ ಬಗ್ಗೆ ತುರ್ತಾಗಿ ಚರ್ಚೆ ಮಾಡಬೇಕಾಗಿರುವಂಥಾದ್ದು. ಇದರ ಬಗ್ಗೆ ತ್ವರಿತವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಆ ಕಾಳನ್ನು ಉಪಯೋಗ ಮಾಡಿಕೊಳ್ಳಬೇಕು, ತನ್ಮೂಲಕ ಕೂಲಿಗಾರರಿಗೆ ಕೆಲಸವನ್ನು ಕೊಡಬೇಕು. ಕೆಲವು ಶಾಶ್ವತ ಕಾಮಗಾರಿಗಳನ್ನು ಮಾಡುವಂಥಾದ್ದಕ್ಕೆ, ತಾವು ಅವಕಾಶವನ್ನು ಮಾಡಿಕೊಡಬೇಕು. ಆ ದಿಕ್ಕಿನಲ್ಲಿ ಸನ್ಮಾನ್ಯ ಸಚಿವರು ಈಗ ಕೊಟ್ಟಿರುವಂತಹ ಉತ್ತರದಿಂದ ನನಗೆಂತೂ ಸಮಾಧಾನವಿಲ್ಲ. ಈಗ ಮಾನ್ಯ ಸಚಿವರು ಕೆಲಸ ಸ್ಥಗಿತವಾಗಿಲ್ಲವೆಂದರೆ, ನಿನ್ನೆ ದಿವಸ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಜಲ ಸಂಪನ್ಮೂಲ ಸಚಿವರು ಮಾತನಾಡುವಾಗ ಕೆಲಸಗಳು ಸ್ಥಗಿತಗೊಂಡಿದೆಯೆಂದು ಒಪ್ಪಿಕೊಂಡರು. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಅಕ್ಕಿ ಮುಗ್ಗಲಾಗಿದೆ. ಅದಕ್ಕೆ ಏನು ಕ್ರಮವನ್ನು ಕೈಗೊಳ್ಳುತ್ತಿದ್ದಾರೆ. ಈಗ ಮಾರ್ಗಸೂಚಿ ಏನು ಇದೆ, ಅದನ್ನು ಪರಿಷ್ಕರಣೆ ಮಾಡಿ, ತುರ್ತಾಗಿ ಕೆಲಸನವನ್ನು ಮಾಡಿಸುತ್ತಿರಾ ? ಇಲ್ಲವಾ ? ಇದರ ಬಗ್ಗೆ ಸರ್ಕಾರದ ಆಲೋಚನೆ ಏನೆಂಬುದನ್ನು ದಯಮಾಡಿ ತಿಳಿಸಬೇಕು, ಆ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಬೇಕೆಂದು, ನಾನು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ, ಈ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಹೇಳಬಯಸುವುದೇನೆಂದರೆ, ಯಾರ ಯಾರನ್ನೋ ಬಲಿಪಶು ಮಾಡುತ್ತಿದ್ದಾರೆ. ಇಲ್ಲಿ ತಾಲ್ಲೂಕು ಟಾಸ್ಕ್‌ಫೋರ್ಸ್ ಕಮಿಟಿಯು ಮಾನಿಟರ್ ಮಾಡಬೇಕಾಗಿತ್ತು. ಜಿಲ್ಲಾ ಸಮಿತಿ ಮಾನಿಟರ್ ಮಾಡಬೇಕಾಗಿತ್ತು. ನಮಗೆ ಜವಾಬ್ದಾರಿಕೆ ಇಲ್ಲವಾ ? ನಾನು ಮಾತ್ರ ಶಾಸಕನಾಗಿದ್ದರೆ I would have owned the responsibility. ಇಲ್ಲಿ ನಾನು ಏನು ಹೇಳುತ್ತಿದ್ದೇನೆಂದರೆ, ನನ್ನದು ತಪ್ಪು ನನ್ನ ಮೇಲೆ ಕ್ರಮ ತೆಗೆದುಕೊಳ್ಳಿ ಎನ್ನುತ್ತಿದ್ದೆ. ನೀವು ಸಹ ಆದೇಶವನ್ನು ಕೊಟ್ಟಿದ್ದೀರಿ. ನಿಮಗೆ ಸೂಪರ್‌ವೈಸ್ ಮಾಡುವುದಕ್ಕೆ ಅಧಿಕಾರವಿಲ್ಲವೇ ? ಮಾನಿಟರ್ ಮಾಡುವುದಕ್ಕೆ ಅಧಿಕಾರವಿರುತ್ತಿರಲಿಲ್ಲವೇ ? ಆಗ ನೀವು ಏಕೆ ಗಮನಿಸಲಿಲ್ಲ, ಸೂಚನೆಯನ್ನು ಏಕೆ ಕೊಡಲಿಲ್ಲ ? ಇಲ್ಲಿ ಯಾರನ್ನೋ ಏಕೆ ಬಲಿಪಶು ಮಾಡುತ್ತಿರಾ ? ಈಗ ನನ್ನ ಅಭಿಪ್ರಾಯವೇನೆಂದರೆ, ಇಲ್ಲಿ ಸರಿಯಾಗಿ ಕೆಲಸ ಆಗಿದೆಯೋ, ಇಲ್ಲವೋ, ಎಂಬುದನ್ನು ನೋಡಬೇಕು, ಸರಿಯಾಗಿ ಆಗಿಲ್ಲವೆಂದರೆ, ಅವರನ್ನು ನೇಣಿಗೆ ಹಾಕಿ, ನಾನು ಹೇಳಿದೆ. There are very serious procedural lapses. ಇದೆ, ಇದಕ್ಕೆ ನೀವೆಲ್ಲಾ ಒಪ್ಪಿಕೊಂಡು ಬಂದಿದ್ದೀರಿ, ಮೌಖಿಕವಾಗಿ ಆದೇಶವನ್ನು ಕೊಟ್ಟಿದ್ದೀರಿ. ಕೆಲಸ ಆಗಿದೆ, ಇವತ್ತು ಯಾರನ್ನೋ ಏಕೆ ಬಲಿಪಶು ಮಾಡಲು ಹೋಗುತ್ತೀರಿ ? ಅದನ್ನು ಸರಿಪಡಿಸಿ ಇರುವ ಪದ್ಧತಿಯನ್ನು ಪರಿಷ್ಕರಣೆ ಮಾಡಿ, ಇರುವಂತಹ

ಅಕ್ಕಿಯನ್ನು ಸದುಪಯೋಗ ಮಾಡಿ, ಅದು ಮುಗ್ಗಾಗಿ ಮಣ್ಣಾಗುವುದಕ್ಕೆ ಬಿಡಬೇಡಿಯೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇದರ ಬಗ್ಗೆ ಸನ್ಮಾನ್ಯ ಸಚಿವರು, ಸೃಷ್ಟೀಕರಣವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ, ಇನ್ನೂ ಕೆಲವು ವಿಚಾರಗಳು ಇವೆ, ನಾವು ಹೇಳಿದ ನಂತರ ಮಾನ್ಯ ಸಚಿವರು ಉತ್ತರವನ್ನು ಕೊಡಬಹುದು.

ಅಧ್ಯಕ್ಷರು : ಈಗ ಇದರ ಬಗ್ಗೆ ಚರ್ಚೆ ಇಲ್ಲ, ಸೃಷ್ಟೀಕರಣವನ್ನು ಕೇಳಬಹುದಷ್ಟೆ. ಚರ್ಚೆಗೆ ಅವಕಾಶವಿಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಅವರು ಸೃಷ್ಟೀಕರಣವನ್ನು ಕೇಳಬಹುದು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ, ನೂರಾರು ಕೋಟಿ ರೂಪಾಯಿಗಳ ಅಕ್ಕಿ ಹಾಳಾಗುತ್ತಿದೆ.

ಅಧ್ಯಕ್ಷರು : ಈಗ ಮಾನ್ಯ ರಾಮಸ್ವಾಮಿಯವರು ಏನು ವಿಚಾರಗಳನ್ನು ಹೇಳಿದ್ದಾರೋ, ಅದೇ ಹೇಳುವುದು.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಪತ್ರವನ್ನು ಕಳುಹಿಸಿದ್ದೇವೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುವಂಥಾದದ್ದು ಸರಿಯಾದದ್ದು ಅಲ್ಲ, ಇದು ಮಾನ್ಯ ಸಚಿವರಿಗೂ ಗೊತ್ತು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಎ.ಟಿ. ರಾಮಸ್ವಾಮಿಯವರು, ಬಹಳ ಗಹನವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

1.40 ಪಿಎಂ

ಮತ್ತೆ ಅವರು ವಿಷಯವನ್ನು ಚೆನ್ನಾಗಿಯೇ ಸದನದ ಗಮನಕ್ಕೂ ಕೂಡ ತಂದಿರುವ ಕಾರಣದಿಂದಾಗಿ ನಾನು ತಾಂತ್ರಿಕವಾದಂಥ ನೆಪಗಳನ್ನು ಒಡ್ಡುವ ಪ್ರಯತ್ನವನ್ನು ಮಾಡಲಿಲ್ಲ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡೆವಳಿಕೆಯ ನಿಯಮಗಳು 73–ಗಮನ ಸೆಳೆಯುವ ಕಾರ್ಯ ವಿಧಾನದಲ್ಲಿ ಬಹಳಷ್ಟು ಸ್ಪಷ್ಟವಾದಂಥ ವಿಚಾರ ಇದೆ. ಈ ವಿಚಾರದಲ್ಲಿ ಚರ್ಚೆ ಮಾಡಲಿಕ್ಕೆ ಎಳ್ಳಷ್ಟೂ ಅವಕಾಶವಿಲ್ಲ. "ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂಥ ಹೇಳಿಕೆಯ ಮೇಲೆ ಯಾವ ಚರ್ಚೆಯನ್ನು ಮಾಡತಕ್ಕುದಲ್ಲ, ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವು ಯಾರ ಹೆಸರಿನಲ್ಲಿ ಇದೆಯೋ ಆ ಪ್ರತಿಯೊಬ್ಬ ಸದಸ್ಯರು ವಿಧಾನ ಸಭಾಧ್ಯಕ್ಷರ ಅನುಮತಿಯೊಂದಿಗೆ ಸೃಷ್ಟೀಕರಣವನ್ನು ಕೇಳಬಹುದು" ಅದರಂತೆ ಶ್ರೀ ರಾಮಸ್ವಾಮಿಯವರು ಸೃಷ್ಟೀಕರಣವನ್ನೂ ಕೂಡ ಕೇಳಿದ್ದಾರೆ. ಅದರಲ್ಲೂ ಇದು ಬಹಳ ಮಹತ್ವವಾದ ವಿಷಯ ಎನ್ನುವ ಕಾರಣಕ್ಕಾಗಿ ಅದರ ಮೂಲಕವಾಗಿ ಚರ್ಚೆಯನ್ನೂ ಕೂಡ ಮಾಡಿದ್ದಾರೆ. ಉಳಿದಂಥ ನಮ್ಮ ಸನ್ಮಾನ್ಯ ಸದಸ್ಯರುಗಳೂ ಕೂಡ ಈ ವಿಷಯದಲ್ಲಿ ಭಾಗವಹಿಸಬೇಕೆಂದು ಹೇಳಿ ಅವರೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು ಏನೆಂದರೆ ಇದು ಮಹತ್ವವಾದ ಸಂಗತಿಯಾಗಿರುವುದರಿಂದ ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಡುವಂಥ ಹಂತದಲ್ಲಿ ಏನೂ ಆಗಿಲ್ಲ ಎನ್ನುವಂಥ ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಛೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಇದು ಯಾವುದಕ್ಕೂ ಅಡ್ಡಿ ಮಾಡುತ್ತಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಇವತ್ತು ಏನೂ ಆಗಿಲ್ಲ, ನಮ್ಮ ಗಮನಕ್ಕೆ ಬಂದಿಲ್ಲ, ಎಲ್ಲೂ ಕೆಲಸ ನಿಂತಿಲ್ಲ ಎನ್ನುವ ಮಾತನ್ನು ಈಗಾಗಲೇ ನಾವು ನೂರು ಜನ ಶಾಸಕರು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಮಂತ್ರಿಗಳ ಗಮನಕ್ಕೂ ಬಂದಿದೆ, ಅವರ ಕ್ಷೇತ್ರದಲ್ಲೂ ಕೆಲಸ ಆಗಿಲ್ಲ, ಎನ್ನುವುದು ಅವರಿಗೂ ಗೊತ್ತು ಆದರೆ ಅಧಿಕಾರಿಗಳು ಏನೋ ಒಂದು ಮಾಹಿತಿ ಕೊಟ್ಟಿದ್ದಾರೆ ಅದನ್ನು ಓದುತ್ತಿದ್ದಾರೆ. ಬಹುಶಃ 224 ಕ್ಷೇತ್ರದಲ್ಲಿ ಕಾಮಗಾರಿ ಸ್ಥಗಿತಗೊಂಡಿದೆ. ಈಗಾಗಲೇ 4–5 ಇಂಜಿನಿಯರುಗಳು ಸತ್ತುಹೋಗಿದ್ದಾರೆ. ಸಿ.ಒ.ಡಿ ಪೋಲೀಸ್‌ನವರು ಹಿಂಸೆ ಕೊಟ್ಟು ಅವರನ್ನು ನಾನ್–ಬೇಲ್ ಮೇಲೆ ವಾರಂಟ್ ಹಾಕಿಸಿ ಅರೆಸ್ಟ್ ಮಾಡುತ್ತಿರುವುದರಿಂದ ಹಾರ್ಟ್ ಅಟ್ಯಾಕ್ ಆಗಿ ಎಷ್ಟೋ ಜನ ಸತ್ತುಹೋಗಿದ್ದಾರೆ. ಆ ಇಂಜಿನಿಯರುಗಳೆಲ್ಲಾ ಬಂದು ಈ ತರಹ ಆಗಿದೆ ಎನ್ನುವ ವಿಚಾರವನ್ನೂ ಸಹ ಹೇಳಿದ್ದಾರೆ. ಇವತ್ತು ರಾಜ್ಯದಲ್ಲಿ ಕಾಮಗಾರಿ ಸ್ಥಗಿತವಾಗಿದೆ. ಜಿಲ್ಲಾಧಿಕಾರಿಗಳೆಲ್ಲಾ ಅಕ್ಕಿಯನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಗೋಡೌನ್ ಲಾಕ್ ಆಗಿರುವುದನ್ನು ಹೋಗಿ ಯಾರೂ ಬಿಚ್ಚುತ್ತಿಲ್ಲ. ಇಂಜಿನಿಯರುಗಳು ನೋಡುವುದಕ್ಕೆ ಹೋದರೆ ಬೇರೆಯವೆಲ್ಲಾ ಏನೋ ಅಕ್ಕಿ ಮಾರಾಟ ಮಾಡುವುದಕ್ಕೆ ಹೋಗುತ್ತಿದ್ದಾರೆ ಎಂದು ಆ ಇಂಜಿನಿಯರುಗಳನ್ನು ಹಿಡಿದು ಹೊಡೆಯುವಂಥ ಅವಕಾಶಗಳಾಗಿವೆ.

ಅಧ್ಯಕ್ಷರು : ಈಗ ಮಾನ್ಯ ಸಚಿವರು ಏನು ಹೇಳಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ ಇದೆ. ಪ್ರಮುಖವಾದ ಪ್ರಶ್ನೆ ಇದೆ. ಆದ್ದರಿಂದ ಬೇರೆ ನಿಯಮಾವಳಿಗಳಲ್ಲಿ ತೆಗೆದುಕೊಂಡರೆ ಚರ್ಚೆಗೆ ಸಿದ್ಧ ಎಂದು ಹೇಳಿದ್ದಾರೆ. ನಿಯಮ 73ರಲ್ಲಿ ಎಲ್ಲರೂ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶವಿಲ್ಲ ನಿಯಮಗಳನ್ನು ಪಾಲಿಸಿರಿ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಪಕ್ಷದ ಮತ್ತು ಸದನದ ಗೌರವಾನ್ವಿತ ಸದಸ್ಯರು ಬಹಳ ಮಹತ್ವವಾದ ವಿಷಯವನ್ನು ಚರ್ಚೆ ಮಾಡುವುದು ನಿಯಮ 73ರಲ್ಲಿ ಆಗುವುದಿಲ್ಲ. ಅದಕ್ಕಾಗಿಯೇ ತಾವು ಒಂದು ನೋಟೀಸ್ ಕೊಡಿ, ಆ ನೋಟೀಸ್ ಕೊಟ್ಟು ಅದರ ಮೂಲಕವಾಗಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ. ಅದರ ಬಗ್ಗೆ ಯಾರದ್ದೂ ತಕರಾರು ಇಲ್ಲ, ಆದರೆ ಇಲ್ಲಿ ಏನು ಮಾನ್ಯರಾಮಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಬಹಳ ಗೊಂದಲ ಇರತಕ್ಕಂಥದ್ದು ಇದೆ. ನಿರಪರಾಧಿಗಳಾಗಿರತಕ್ಕಂಥ ಅಧಿಕಾರಿಗಳನ್ನೆಲ್ಲಾ ಸಿ.ಒ.ಡಿಯವರು ತನಿಖೆಗೆ ಒಳಪಡಿಸಿ 29 ಮಂದಿಯನ್ನು ನಾವು ಜಾಮೀನುರಹಿತವಾಗಿರತಕ್ಕಂಥದ್ದರಲ್ಲಿ ಬಂಧಿಸಿದ್ದೇವೆ. ಆ ಸಂದರ್ಭದಲ್ಲಿ ಮಾನ್ಯ ರಾಮಸ್ವಾಮಿಯವರು ಬಹಳ ಸೂಕ್ಷ್ಮವಾಗಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಆ ಸಂದರ್ಭದಲ್ಲಿ ಹಿಂದೆ ಶಾಸಕರಾಗಿದ್ದಂಥ ಸಮಿತಿಯ ಸದಸ್ಯರಾದಂಥವರು ಅಥವಾ ಅಧ್ಯಕ್ಷರಾದಂಥವರು ಆ ಉಸ್ತುವಾರಿಯನ್ನು ನೋಡಿಕೊಳ್ಳಬೇಕಾಗಿತ್ತು. ಕಾಮಗಾರಿ ಏನಾಗಿದೆ ಎನ್ನುವುದನ್ನು ನೋಡಬೇಕಾಗಿತ್ತು. ಪ್ರತಿಯೊಂದು ಕಾಮಗಾರಿಗಳಿಗೆ ಸಂಬಂಧಪಟ್ಟಂಥ ನೋಡಲ್ ಆಫೀಸರ್ಸ್ ಇದ್ದರು. ಕಾರ್ಯದರ್ಶಿ ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಇದ್ದರು. ಅವರೆಲ್ಲರೂ ಕೂಡ ಸರಿಯಾದಂಥ ಉತ್ತರವನ್ನು ಕೊಟ್ಟು ಆ ಕಾಲದಲ್ಲಿಯೇ ಕಾಲಕಾಲಕ್ಕೆ ಇದನ್ನು ನಿಯಂತ್ರಿಸಿದ್ದರೆ ಈ ತರಹ ಆಗುತ್ತಿರಲಿಲ್ಲ ಮತ್ತು ಆ ಕಾಮಗಾರಿಗಳನ್ನು ಹೇಳುವಂಥ ಸಂದರ್ಭದಲ್ಲಿ ಮಾನವ ತಾಸುಗಳನ್ನು ಖರ್ಚು ಮಾಡಿ ಅವರಿಗೆ ಉದ್ಯೋಗವನ್ನು ಕೊಡತಕ್ಕಂಥದ್ದರ ಬದಲು ಈ

ಮೆಟೀರಿಯಲ್ ಕಾಂಪೊನೆಂಟ್ ಹೆಚ್ಚಾಗುವಂಥ ಸಾಮಗ್ರಿಗಳು ಪದಾರ್ಥಗಳಿಗೆ ಸಂಬಂಧಪಟ್ಟಂಥ ಕಾಮಗಾರಿಗಳನ್ನು ಕೈಗೊಳ್ಳಬೇಕೆನ್ನತಕ್ಕಂಥ ಶಿಫಾರಸ್ಸು ಮಾಡಿದಾಗ ಅವರ ಜವಾಬ್ದಾರಿಗಳು ಹೆಚ್ಚು ಎನ್ನುವಂಥ ಈ ಎಲ್ಲಾ ವಿಚಾರವನ್ನು ಮಾನ್ಯ ರಾಮಸ್ವಾಮಿಯವರು ಮಾತನಾಡಿದ್ದು ಇದಕ್ಕೆ ಸಮಗ್ರ ಉತ್ತರ ಬೇಕಾಗುತ್ತದೆ. ಇನ್ನು ಹೇಳಿಕೆಯಲ್ಲಿ ಇಲ್ಲ ಎನ್ನತಕ್ಕಂಥ ಮಾತು ಏನು ಹೇಳಿದ್ದೇವೆ, ಈ 1,71,000 ಮೆಟ್ರಿಕ್ ಟನ್ ಆಹಾರಧಾನ್ಯಗಳಲ್ಲಿ ಕೆಲವು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದು ಏನಿದೆ. 16,603.2 ಟನ್ ಅಕ್ಕಿಯನ್ನು ಇವತ್ತು ಹೈಕೋರ್ಟಿನ ಅಜ್ಞೆಯ ಕೆಳಗೆ 8,000 ಟನ್‌ಗಳನ್ನು ಮೆ: ಶಾರ್ಪ್ ಮಿತ್ತಲ್ ಇಂಡಿಯಾ ಲಿ. ಅನ್ನತಕ್ಕಂಥವರಿಗೆ ರಿಲೀಸ್ ಮಾಡಬೇಕೆಂದು ಆರ್ಡರ್ ಆಗಿದೆ. ಅದೇ ರೀತಿಯಾಗಿ ಅಡಿಶನಲ್ ಜೆ.ಎಂ.ಎಫ್.ಸಿ. ಕೋರ್ಟ್‌ನಿಂದ ಇಂಥ ಕ್ವಾಂಟಿಟಿ ಯಾವುದನ್ನು seize ಮಾಡಿದ್ದೀರಿ ಅದನ್ನು auction ಮಾಡಬೇಡಿ ಎನ್ನತಕ್ಕಂಥ ರೀತಿಯ್ಲಲಿ ಕೂಡ ತಡೆಯಾಜ್ಞೆ ಬಂದಿದೆ. ಇದು ಮಾಹಿತಿಗಾಗಿ ಕೊಟ್ಟಿರತಕ್ಕಂಥದ್ದು ಆದರೆ ತಾವು ಏನೇನು ವಿಚಾರ ಹೇಳಿದ್ದೀರಿ ಕೆಲಸ ಸ್ಥಗಿತಗೊಂಡಿಲ್ಲ ಎನ್ನುವ ಮಾತು ಹೇಳಿರತಕ್ಕಂಥದ್ದು ಬಹಳ ತಾಂತ್ರಿಕವಾಗಿ ನಾವು ಹೇಳಿದ್ದೇವೆ. ಆದರೆ ಅಲ್ಲಿ ಬಂದಿರತಕ್ಕಂಥ ವರದಿಯ ಪ್ರಕಾರ ನಮ್ಮಲ್ಲಿರತಕ್ಕಂಥ ಇಂಜಿನಿಯರುಗಳು ಕೆಲವರು ಎತ್ತುವಳಿ ಮಾಡಿಕೊಂಡು ಹೋಗಿಲ್ಲ. ಇಂಜಿನಿಯರ್ಸ್ ಎಲ್ಲಾ ಏನು ಮನವಿಯನ್ನು ಕೊಟ್ಟಿದ್ದಾರೆಂದರೆ, 'ನೀವು ಈ ಎನ್‌ಎಂಆರ್ ಪದ್ಧತಿಯನ್ನು ಕೈಬಿಡಿ. ಇದರ ಜವಾಬ್ದಾರಿ ನಮಗೆ ಬೇಕಾಗಿಲ್ಲ. ನಾವು ಕೆಲಸಗಳನ್ನು ಮಾಡಬೇಕಾಗಿರತಕ್ಕಂಥ ಸಂದರ್ಭಗಳಲ್ಲಿ ವಿತರಣೆ ಮಾಡತಕ್ಕಂಥ ಜನರನ್ನು ಬೇರೆ ಇಡಿ' ಎನ್ನತಕ್ಕಂಥ ಕೆಲವು ಸಲಹೆಗಳನ್ನು ಅವರು ಕೊಟ್ಟಿದ್ದಾರೆ. ಆದರೆ ಅವರಿಗೆ ನಾವು ಹೇಳಿದ್ದೇವೆ. ಅದೇನೆಂದರೆ ಬೇರೆ ಶಾಸಕರುಗಳಾಗಿರಲಿ, ಮಂತ್ರಿಗಳಾಗಿರಲಿ ಅಥವಾ ಬೇರೆ ಯಾರೇ ಆಗಿರಲಿ, ನಿಯಮಾವಳಿಗಳಿಗೆ ಅನುಗುಣವಲ್ಲದಂಥ ಕೆಲಸಗಳನ್ನು ಮಾಡಿದಾಗ ನಿಮಗೆ ತೊಂದರೆಯಾಗುತ್ತದೆ. ಈ ತೊಂದರೆ ಇರುವುದರಿಂದ 2–3 ಸಲಹೆಗಳನ್ನು ನಮ್ಮ ಮುಂದೆ ಬಂದಿವೆ. ಆ 2–3 ಸಲಹೆಗಳನ್ನೂ ಕೂಡ ಚರ್ಚೆ ಮಾಡುತ್ತಿದ್ದೇವೆ. ಯಾವ ರೀತಿ ಪರಿಹಾರವನ್ನು ಕೊಡಬೇಕೆನ್ನತಕ್ಕಂಥದ್ದು, ಅದೇ ರೀತಿಯಾಗಿ ಕೇಂದ್ರ ಸರ್ಕಾರಕ್ಕೆ 'ನಿಮ್ಮ ಮಾನದಂಡಗಳೇನಿವೆ ನೀವು ಅಜ್ಞೆ ಮಾಡತಕ್ಕಂಥ ರೀತಿಯಲ್ಲಿ ಕೂಲಿಯನ್ನು ಇಷ್ಟಕ್ಕೇ ನಿರ್ಧಾರ ಮಾಡಿರತಕ್ಕಂಥದ್ದು ಏನಿದೆ. ಅದು 15 ರೂಪಾಯಿ ದುಡ್ಡು ಕೊಡಬೇಕು. "5 ಕೆ.ಜಿ. ಅಕ್ಕಿ ಕೊಡಬೇಕು, ರೂ. 6.25ರಲ್ಲಿ ವಿತರಣೆಯಾಗಬೇಕೆನ್ನತಕ್ಕಂಥ ನಿಯಮ ಏನಿದೆ ಅದು ರಾಜ್ಯ ರಾಜ್ಯಕ್ಕೆ ವ್ಯತ್ಯಾಸವಾಗುತ್ತದೆ. ರಾಜ್ಯದೊಳಗಡೆ ಜಿಲ್ಲೆ ಜಿಲ್ಲೆಗೆ ವ್ಯತ್ಯಾಸವಾಗುತ್ತದೆ. ಆದ್ದರಿಂದ ಅದರ ಸ್ವಾತಂತ್ರವನ್ನು ಆಯ್ಕೆಯನ್ನು ನಮಗೆ ಕೊಡಬೇಕೆನ್ನುವಂಥ ವಿಚಾರವನ್ನೂ ಕೂಡ ಕೇಂದ್ರಸರ್ಕಾರಕ್ಕೆ ಮನವರಿಕೆ ಮಾಡಿಕೊಡುತ್ತಿದ್ದೇವೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಾವು ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಂಡರೆ ಸಮಾಧಾನಕರವಾದಂಥ ಉತ್ತರವನ್ನು ಕೊಡಲಿಕ್ಕೆ ಸಾಧ್ಯತೆ ಆಗುತ್ತದೆ. ಆದ್ದರಿಂದ ತಾವು ಇದನ್ನು ಮಾಡಿ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ರೂ. 46.25 ಅನ್ನು ಕೊಟ್ಟು ಕೂಲಿ ಮಾಡಿಸಬೇಕೆಂದು ನೀವು ಹೇಳಿದಿರಿ. ಕೃಷಿ ಕಾರ್ಮಿಕನಿಗೆ ಸರ್ಕಾರ minimum wages fix ಮಾಡಿರುವುದು ರೂ. 77–00 ನೀವು ಅಂದರೆ ಸರ್ಕಾರದವರು ಇದನ್ನು ಹೇಗೆ ಖಾಸಗಿಯವರನ್ನು ಇಷ್ಟಕ್ಕೆ enforce ಮಾಡುತ್ತೀರಿ ? ನೀವು ಇಲ್ಲಿ ರೂ. 46.25 ಪೈಸೆ ಕೊಡುವುದಕ್ಕೆ ಆದೇಶ ಕೊಟ್ಟು ಸರ್ಕಾರದ minimum wages policy ಪ್ರಕಾರ ಸರ್ಕಾರವೇ 77–00 ರೂಪಾಯಿ ನಿಗದಿ ಮಾಡಿದ್ದೀರಲ್ಲಾ, ಹಾಗಾದರೆ ಸರ್ಕಾರದವರೇ ರೂ. 46.25 ಪೈಸೆ ಕೊಟ್ಟು ಬೇರೆಯವರಿಗೆ ಹೇಗೆ enforce ಮಾಡುತ್ತೀರಿ ? ಅದಕ್ಕಾಗಿಯೇ ಇದರಲ್ಲಿ

ಬಹಳ ಅವೈಜ್ಞಾನಿಕವಾಗಿದೆ ಎಂದು ನಾನು ಹೇಳಿದ್ದು. ಆದ್ದರಿಂದ ದಯಮಾಡಿ ಕನ್‌ವರ್ಟ್ ಮಾಡಿ ಚರ್ಚೆಗೆ ಸೋಮವಾರ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಸಭಾಧ್ಯಕ್ಷರೇ, Government is a model employer ಎಂದು ಹೇಳುತ್ತೇವೆ. ಕೇಂದ್ರ ಸರ್ಕಾರದವರು 46 ರೂಪಾಯಿ 25 ಪೈಸೆ ನಿಗದಿಮಾಡಿರತಕ್ಕಂಥದ್ದು ಇದೆ. 15 ರೂಪಾಯಿ ದುಡ್ಡು ಕೊಡಬೇಕು ಮತ್ತು 5 ಕೆ.ಜಿ. ಅಕ್ಕಿಯನ್ನು ಅವರಿಗೆ ಕೊಡಬೇಕೆನ್ನತಕ್ಕಂಥ ಮಾತನ್ನು ಅವರು ಹೇಳುತ್ತಾರೆ. ಮಾನ್ಯ ಸದಸ್ಯರು ಹೇಳಿದಂತೆ ಇದು ಅವೈಜ್ಞಾನಿಕವಾಗಿರುವಂಥದ್ದು ಆ ಕಾರಣಕ್ಕಾಗಿಯೇ ಆ ಒಂದು ಆಯ್ಕೆಯನ್ನು, ಆ ಸ್ವತಂತ್ರವನ್ನು ರಾಜ್ಯ ಸರ್ಕಾರಕ್ಕೆ ಕೊಡಿ ಎನ್ನತಕ್ಕಂಥ ಮಾತನ್ನೂ ಕೂಡ ಅವರಿಗೆ ಮನವರಿಕೆ ಮಾಡಿಸುತ್ತಾ ಬಿಂಬಿಸುತ್ತಿದ್ದೇವೆ. ಇದರ ಬಗ್ಗೆ ಸಮಗ್ರ ಚರ್ಚೆ ಆಗಬೇಕಾಗುತ್ತದೆ. 2–3 ಆಯ್ಕೆಗಳಾಗುತ್ತವೆ. ಮತ್ತೆ ಮಾನ್ಯ ಶಾಸಕರು ಹೇಳಿದಂತೆ ಶಾಸಕರ ನೇತೃತ್ವದಲ್ಲಿ ರಚನೆಯಾಗಿರತಕ್ಕಂಥ ಸಮಿತಿ ಬಹಳ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗುತ್ತದೆ. ಅಲ್ಲಿ ಸುತ್ತೋಲೆಯ ಮಾರ್ಗಸೂಚಿಗಳನ್ನು ಕೈಬಿಟ್ಟು ನೀವು ಬೇರೆ ಬೇರೆ ವಿಚಾರಗಳನ್ನು ಮಾಡಿದಾಗ ಬೇರೆಯವರೂ ಕೂಡ ಅಧಿಕಾರಿಗಳು ಈ ಅನಾವಶ್ಯಕವಾದಂಥ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಅದೂ ಕೂಡ ನಿಮ್ಮ ಮಾತಿನ ಹಿನ್ನೆಲೆಯಲ್ಲಿದೆ. ನಾವು ಈ ವಿಚಾರದಲ್ಲಿ ಚರ್ಚೆ ಮಾಡಿ ನಿಲುವಳಿ ಸೂಚನೆ ಕಳೆದ ಅಧಿವೇಶನದಲ್ಲಿ ಬಂದಾಗ ನಾವು ಯಾವ ಆಯ್ಕೆಯನ್ನು ಆಯ್ದುಕೊಳ್ಳಬೇಕೆನ್ನತಕ್ಕಂಥ ಪ್ರಶ್ನೆಯನ್ನೂ ಕೂಡ ಸನದ ಮುಂದೆ ಇಟ್ಟಿದ್ದೇವೆ. ನೀವು ಹಾಗಾದರೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಕೊಡಗು ಜಿಲ್ಲೆ, ಅಥವಾ ಮಲೆನಾಡಿನ ಪ್ರದೇಶವಾದ ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಇಲ್ಲಿ ಈ ದುಡ್ಡಿಗೆ ಯಾರೂ ಕೂಲಿ ಕೆಲಸಕ್ಕೆ ಬರುವುದಿಲ್ಲ. ನಮ್ಮ ಮುಂದಿರತಕ್ಕಂಥ ಆಯ್ಕೆಯೇನು? ಹಾಗಾದರೆ ನಿಮ್ಮ ಅಕ್ಕಿ ಬೇಕಾಗಿಲ್ಲ, ನಮ್ಮ ಜನ ಇದಕ್ಕೆ ಕೂಲಿ ಕೆಲಸಕ್ಕೆ ಬರುವುದಿಲ್ಲ ಎನ್ನತಕ್ಕಂಥ ಮಾತನಾಡಿದರೆ ನಮ್ಮ 162 ತಾಲ್ಲೂಕುಗಳಲ್ಲಿ ಬರಗಾಲ ಇದೆಯೆಂದು ಘೋಷಣೆ ಮಾಡಿರತಕ್ಕಂದ್ದಕ್ಕೆ ಅರ್ಥ ಏನಿದೆ ? ಕೆಲವು ಕಾಮಗಾರಿಗಳಿಗೆ ನಾವು ಯಂತ್ರಗಳನ್ನು ಉಪಯೋಗಿಸಲೇ ಬೇಕಾಗುತ್ತದೆ. ಯಂತ್ರಗಳನ್ನು ಉಪಯೋಗಿಸಿದರೆ ಅದನ್ನು ಮಾನವ ತಾಸುಗಳಿಗಾಗಿ ಪರಿವರ್ತನೆಗೊಳಿಸಿ ಏನ್‌ಎಂಆರ್ ತಯಾರು ಮಾಡಬೇಕಾಗುತ್ತದೆ. ಅದು ತಂದಿರುವುದು ಅನಾವಶ್ಯಕ ಎಂದು ಹೇಳುವುದಿಲ್ಲ ಅದು ಒಂದು ವಾಸ್ತವ ಸಂಗತಿಗಳ ಹಿನ್ನೆಲೆಯಲ್ಲಿ ಅದನ್ನು ಮಾಡಬೇಕಾಗಿರುತ್ತದೆ. ಇದಕ್ಕೆ ನಾವೆಲ್ಲರೂ ಕೂಡ ಜವಾಬ್ದಾರರಾಗಿದ್ದೇವೆ. ಪಾಪ! ಅಲ್ಲಿ ಅರಿಯಲಾರದಂಥ ಕೆಲವು ಜನ ಅಧಿಕಾರಿಗಳು ತೊಂದರೆಗೆ ಸಿಕ್ಕಿಕೊಂಡಿರಬಹುದು. ಆದರೆ ಅನೇಕ ಅಧಿಕಾರಿಗಳು ತಪ್ಪು ಮಾಡಿದಂಥವರೂ ಇದ್ದಾರೆ ಮತ್ತು ನಿಯಮಾವಳಿಗಳನ್ನು ಮೀರಿ ನಡೆದುಕೊಂಡಂಥವರು ಇದ್ದಾರೆ. ಆ ನಿಯಮಾವಳಿಗಳನ್ನು ಮೀರಲಿಕ್ಕೆ ಹೇಳಿರತಕ್ಕಂಥವರು ನಮ್ಮಲ್ಲಿರುವಂಥ ಉಸ್ತುವಾರಿ ನೋಡತಕ್ಕಂಥ ಶಾಸಕರೂ ಇದ್ದೇವೆ. ಮಂತ್ರಿಗಳೂ ಇದ್ದೇವೆ, ಜವಾಬ್ದಾರಿಯಾಗಿರತಕ್ಕಂಥ ಜನಗಳೂ ಇದ್ದೇವೆ. ಆ ಕಾರಣಕ್ಕಾಗಿ ಈ ಇಂಜಿನಿಯರ್ಸ್ ಕೊಟ್ಟಿರತಕ್ಕಂಥದ್ದು ಏನಿದೆ ಅದು ನಿಮ್ಮ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಿ ಎಂದು ಇದೆ. ಅದರಲ್ಲಿ 'ನೀವು ಗ್ರಾಮಪಂಚಾಯಿತಿ ವತಿಯಿಂದ ವಿತರಣೆ ಮಾಡಿರಿ, ನಾವು ನಿಮಗೆ ಟೋಕನ್ ಕೊಡುತ್ತೇವೆ, ಈ ಕಾಮಗಾರಿಯಲ್ಲಿ 250 ಮಂದಿ ಕೆಲಸಕ್ಕೆ ಬಂದಿದ್ದಾರೆಂದು ನಾವು ಟೋಕನ್ ಕೊಡುತ್ತೇವೆ, ಅವರಿಗೆ ನೀವು ವಿತರಣೆ ಮಾಡಿರಿ' ಎಂದು ಅವರು ಹೇಳಿದರು. ಅದೂ ನಮ್ಮ ಮುಂದಿರುವ ಪ್ರಸ್ತಾಪ. ರಾಯಚೂರಿನಲ್ಲಿ ಹೋಗಿ, ನಮ್ಮ ನೋಡಲ್ ಆಫೀಸರ್ ಆಗಿರುವ ಕಾರ್ಯದರ್ಶಿ–2ರವರು, ಅಲ್ಲಿರುವ ಕಿರಾಣಿ ಯಾವುವಿವೆ

(ಗ್ರೋಸರಿ ಷಾಪ್), ನಮ್ಮಲ್ಲಿ ಕೆಲಸ ಮಾಡಿರುವವರಿಗೆ 5–5 ಕೆ.ಜಿ. ಅಕ್ಕಿ ಕೊಡುತ್ತಾರೆ. ಅದನ್ನು ತೆಗೆದುಕೊಂಡವರು, ಒಂದು ಮನೆಯಲ್ಲಿ ಅಕಸ್ಮಾತ್ 3 ಜನ ಕೆಲಸಕ್ಕೆ ಹೋಗಿದ್ದರು. 3 ದಿವಸ ಮಾಡಿದ್ದರು, ಅವರಿಗೆ 45 ಕೆಜಿಯಷ್ಟು ಅಕ್ಕಿ ಬರುತ್ತದೆ. ನಮ್ಮ ಭಾಗದಲ್ಲಿ ಜೋಳ ಬಳಸುತ್ತಾರೆ. ಈ ಭಾಗದಲ್ಲಿ ರಾಗಿ ಬಳಸುತ್ತಾರೆ. ಅವರಿಗೆ ಉಪ್ಪು, ಮೆಣಸಿನಕಾಯಿ ಬೇಕಾಗಿರುತ್ತದೆ, ಬೇರೆ ಸ್ವರೂಪದ ಅಗತ್ಯತೆಗಳು ಬೇಕಾಗಿರುತ್ತದೆ. ಆದುದರಿಂದ, ಲೈಸೆನ್ಸ್‌ಡ್ ಷಾಪ್‌ನವರು ಅದನ್ನು ಕೊಡಿ ಎನ್ನುವ ರೀತಿಯಲ್ಲಿ ಮಹಾರಾಷ್ಟ್ರದಲ್ಲಿ ಒಂದು ಪದ್ಧತಿ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ನಿಯಮ 73ರ ಇವೆಲ್ಲವನ್ನೂ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆ ಕಾರಣಕ್ಕಾಗಿ ಸ್ಪಷ್ಟೀಕರಣ ಕೇಳಿದ್ದಕ್ಕೆ ನಾನು ಅಷ್ಟಕ್ಕೇ ಸೀಮಿತಗೊಳಿಸಿದ್ದೇನೆ. ನಮ್ಮವರು ಈ ಪ್ರಶ್ನೆ ಕೇಳಿದ್ದರಿಂದ ವಿವರವಾಗಿ ನಾನು ಉತ್ತರಿಸಿದ್ದೇನೆ. ದಯವಿಟ್ಟು ಮತ್ತೊಂದು ರೂಪದಲ್ಲಿ ಅಧ್ಯಕ್ಷರು ತೆಗೆದುಕೊಳ್ಳವುದಿದ್ದರೆ, ಆ ವಿಚಾರದಲ್ಲಿ ಕೂಡ ಮುಕ್ತವಾದಂಥ ರೀತಿಯ ನಿಮ್ಮ ಸಲಹೆಗಳ ಆಧಾರದ ಮೇಲೆ, ಕೇಂದ್ರ ಸರ್ಕಾರದ ಸಹಕಾರವನ್ನು ತೆಗೆದುಕೊಂಡು ನಾವು ನಿರ್ಣಯ ಮಾಡುತ್ತೇವೆ.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ....

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನೋಟೀಸ್ ಕೊಟ್ಟಿರುವವರನ್ನು ಬಿಟ್ಟು ಬೇರೆಯವರು ಸ್ಪಷ್ಟೀಕರಣ ಕೇಳುವುದಕ್ಕೆ ಬರುವುದಿಲ್ಲ. ಮಾನ್ಯ ಎ.ಟಿ. ರಾಮಸ್ವಾಮಿಯವರು ಮಾತ್ರ ಮಾಡಬಹುದು.

ಶ್ರೀ ಎಂ.ಪಿ. ಪ್ರಕಾಶ್ : ನಿಯಮ 73ರಲ್ಲಿ ಕ್ಲಿಯರ್ ಆಗಿ ಇದೆ. "ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂಥ ಹೇಳಿಕೆಯ ಮೇರೆ ಯಾವ ಚರ್ಚೆಯನ್ನೂ ಮಾಡತಕ್ಕದ್ದಲ್ಲ. ಅದರ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವು ಯಾರ ಹೆಸರಿನಲ್ಲಿದೆಯೋ, ಆ ಪ್ರತಿಯೊಬ್ಬ ಸದಸ್ಯರು ವಿಧಾನ ಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೇಳಬಹುದು. ಎಂದಿದೆ. ಮಾನ್ಯ ಎ.ಟಿ. ರಾಮಸ್ವಾಮಿಯವರು ಮಾತ್ರ ಸ್ಪಷ್ಟೀಕರಣ ಕೇಳಬಹುದು, ತಾವಲ್ಲ. ಅದಕ್ಕಾಗಿ ಬೇರೆ ರೂಪದಲ್ಲಿ ತಾವು ಕೊಡಿ ಎಂದು ನಾನು ಹೇಳಿದ್ದು.

ಶ್ರೀ ಎಂ.ಪಿ. ವೆಂಕಟೇಶ್ : ಅಧ್ಯಕ್ಷರೆ, ಸೋಮವಾರ ಅವಕಾಶ ಕೊಡಿ.

ಅಧ್ಯಕ್ಷರು : ಬೇರೆ ನಿಯಮಗಳ ಅಡಿ ನೋಟೀಸ್ ಕಳುಹಿಸಿಕೊಡಿ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಬೇರೆ ರೂಪದಲ್ಲಿ ತಾವೇ ಅದನ್ನು ಪರಿವರ್ತನೆ ಮಾಡಿ ಕೊಡಿ.

ಅಧ್ಯಕ್ಷರು : ಇವತ್ತು ಸಾಧ್ಯವಾಗುವುದಿಲ್ಲ. ಮಾಡಿಕೊಡೋಣ. ಆಯಿತು.

ಶ್ರೀ ಡಿ.ಟಿ. ಜಯಕುಮಾರ್ : ಸೋಮವಾರ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಯಿತು.

ಆ) ಬಳ್ಳಾರಿಯನ್ನು ಹೊಸದಾಗಿ ರಚಿಸಲಿರುವ ರಾಯಲ ಸೀಮೆ ರಾಜ್ಯಕ್ಕೆ ಸೇರ್ಪಡೆ ಮಾಡಬೇಕೆಂಬ ವರದಿ ಬಗ್ಗೆ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಸನ್ಮಾನ್ಯ ಅಧ್ಯಕ್ಷರೇ, ಬಳ್ಳಾರಿಯನ್ನು ಹೊಸದಾಗಿ ರಚಿಸುವ ರಾಯಲ್ ಸೀಮಾಗೆ ಸೇರ್ಪಡೆ ಮಾಡಬೇಕೆಂಬ ವರದಿಯಿಂದ ಉಂಟಾಗಿರುವ ಗೊಂದಲದ ಬಗ್ಗೆ ಮಾನ್ಯ ಸಂಸದೀಯ ಹಾಗೂ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.